


بسم اللهِ الرّحمٰنِ الرّحیم

# ಪ್ರವಾದಿ ಚರಿತ್ರೆ – ಪೈಗಂಬರ್(ಸ)ರ ಕಾಲದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31-01-2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಜುಮಾ ಧೀಖರ್‌ದ್ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಹಿಂದೆ ಹೇಳಲಾದಂತೆ ಹಝ್ರತ್ ಪೈಗಂಬರ್(ಸ) ಈ ಯುದ್ಧಕ್ಕಾಗಿ ಹೋಗುವುದಕ್ಕೆ ಮುಂಚೆ ಕೆಲವು ಸಹಾಬಿಯರನ್ನು ಶತ್ರುಗಳ ಕಡೆಗೆ ಕಳುಹಿಸಿದ್ದರು. ಅನಂತರ ಹಝ್ರತ್ ಪೈಗಂಬರ್(ಸ) ಅವರ ಹಿಂದೆ ತನ್ನ ಸೈನ್ಯದೊಂದಿಗೆ ಹೊರಟರು. ಈ ಸಂಬಂಧವಾಗಿ ಹೆಚ್ಚಿನ ವಿವರಣೆ ಹೀಗಿದೆ: ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರು ಬಂದಾಗ ಶತ್ರುಗಳ ಸೇನೆ ಅವರನ್ನು ನೋಡಿ ಓಡಿ ಹೋಯಿತು. ಮುಸ್ಲಿಮರು ಶತ್ರುಗಳ ತಂಗುದಾಣಕ್ಕೆ ತಲುಪಿದಾಗ ಅಲ್ಲಿ ಹಝ್ರತ್ ಅಬೂಖತಾದ(ರ)ರ ಕುದುರೆ ಇತ್ತು. ಅದರ ಹಿಂಗಾಲಿನ ಭಾಗವನ್ನು (ಸ್ನಾಯುರಜ್ಜುಗಳನ್ನು) ಕತ್ತರಿಸಲಾಗಿತ್ತು. ಸಹಾಬಿಯೊಬ್ಬರು ಹೇಳಿದರು: ಯಾ ರಸೂಲಲ್ಲಾಹ್, ಅಬೂಖತಾದರ ಕುದುರೆಯ ಸ್ನಾಯುರಜ್ಜುಗಳನ್ನು ಕತ್ತರಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಅದರ ಬಳಿ ನಿಂತುಕೊಂಡು ಎರಡು ಬಾರಿ ನಿನಗೆ ಒಳ್ಳೆಯದಾಗಲಿ, ನಿನಗೆ ಎಷ್ಟೆಲ್ಲ ಶತ್ರುಗಳಿವೆ ಎಂದು ಹೇಳಿದರು. ಅನಂತರ ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರು ಮುಂದಕ್ಕೆ ಸಾಗಿದರು. ಕೊನೆಗೆ ಹಝ್ರತ್ ಅಬೂಖತಾದ(ರ) ಮತ್ತು ಮಸ್‌ಅದ ಮಲ್ಲ ಯುದ್ಧ ಮಾಡಿದ್ದ ಜಾಗಕ್ಕೆ ತಲುಪಿದರು. ಅಬೂಖತಾದ(ರ)ರನ್ನು ಚಾದರದಲ್ಲಿ ಹೊದಿಸಲಾಗಿದೆ ಎಂದು ಅವರು ಭಾವಿಸಿದರು. ಅಬೂಖತಾದ(ರ) ಶಹೀದ್ ಆಗಿರುವರು ಎಂದು ತೋರುತ್ತಿದೆ ಎಂಬುದಾಗಿ ಒಬ್ಬ ಸಹಾಬಿ ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಅಬೂಖತಾದ(ರ)ರ ಮೇಲೆ ಕೃಪೆದೋರಲಿ. ನನಗೆ ಗೌರವವನ್ನು ದಯಪಾಲಿಸಿದ ಅಲ್ಲಹನ ಆಣೆ, ಅಬೂಖತಾದ(ರ) ಶತ್ರುಗಳ ಹಿಂದೆ ಹಾಡುತ್ತಾ ಹೋಗುತ್ತಿರುವರು. ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಬೇಗನೇ ಹೋಗಿ ಚಾದರವನ್ನು ತೆರೆದಾಗ ಅದರಲ್ಲಿ ಮಸ್‌ಅದ್‌ನ ಮುಖವನ್ನು ಕಂಡರು. ಅವರಿಬ್ಬರೂ ಹೇಳಿದರು: ಅಲ್ಲಾಹು ಅಕ್ಬರ್, ಅಲ್ಲಾಹನ ಪ್ರವಾದಿ ಹೇಳಿದ್ದು ಸತ್ಯ. ಯಾ ರಸೂಲಲ್ಲಾಹ್, ಈತ ಮಸ್‌ಅದ್ ಆಗಿದ್ದಾನೆ. ಆಗ ಸಹಾಬಿಯರು ಕೂಡ ತಕ್ಬೀರ್ ಹೇಳಿದರು. ಅನಂತರ ಸ್ವಲ್ಪ ಸಮಯದಲ್ಲೇ ಹಝ್ರತ್ ಅಬೂಖತಾದ(ರ) ಒಂಟೆಯಲ್ಲಿ ಸವಾರನಾಗಿ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದರು.

ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಖತಾದ, ನಿಮ್ಮ ಮುಖ ಯಶಸ್ವಿಯಾಯಿತು. ಅಬೂಖತಾದ ಕುದುರೆಸವಾರರ ಸರದಾರರಾಗಿದ್ದಾರೆ. ಹೇ ಅಬೂಖತಾದ, ಅಲ್ಲಾಹನು ನಿಮ್ಮಲ್ಲಿ ಅನುಗ್ರಹವನ್ನು ಇರಿಸಲಿ. ಮತ್ತೊಂದು ವರದಿಯಲ್ಲಿ ಹೀಗಿದೆ: ನಿಮ್ಮ ಮಕ್ಕಳು ಮತ್ತು ಮಕ್ಕಳ ಮಕ್ಕಳಲ್ಲಿ ಅನುಗ್ರಹವನ್ನು ಇರಿಸಲಿ. ಅನಂತರ ಹಝ್ರತ್ ಪೈಗಂಬರ್(ಸ) ಕೇಳಿದರು: ಎಲೈ ಅಬೂಖತಾದ, ನಿಮ್ಮ ಮುಖದಲ್ಲಿ ಏನಾಗಿದೆ? ಹಝ್ರತ್ ಅಬೂ ಖತಾದ(ರ) ಹೇಳಿದರು: ನನ್ನ ತಂದೆತಾಯಂದಿರು ನಿಮ್ಮ ಮೇಲೆ ಅರ್ಪಿತವಾಗಲಿ. ನನಗೆ ಒಂದು ಬಾಣ ತಗುಲಿತ್ತು. ನಿಮಗೆ ಗೌರವವನ್ನು ದಯಪಾಲಿಸಿದ ಅಲ್ಲಾಹನ ಆಣೆ, ನಾನು ಆ ಬಾಣವನ್ನು ಹೊರಗೆ ತೆಗೆದಿದ್ದೇನೆ ಎಂದು ನಾನು ಭಾವಿಸಿದ್ದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಖತಾದ(ರ) ನನ್ನ ಬಳಿಗೆ ಬನ್ನಿರಿ. ಅವರು ಸಮೀಪಕ್ಕೆ ಬಂದಾಗ ಹಝ್ರತ್ ಪೈಗಂಬರ್(ಸ) ಮೆಲ್ಲನೇ ಆ ಬಾಣವನ್ನು ಹೊರಗೆಳೆದರು ಮತ್ತು ತನ್ನ ಜೊಲ್ಲನ್ನು ಅದಕ್ಕೆ ಸವರಿದರು ಮತ್ತು ತನ್ನ ಕೈಯನ್ನು ಅದರ ಮೇಲೆ ಇಟ್ಟರು. ಅಬೂಖತಾದ(ರ) ಹೇಳಿದರು: ಹಝ್ರತ್ ಪೈಗಂಬರ್(ಸ)ರಿಗೆ ಪ್ರವಾದಿತ್ವವನ್ನು ದಯಪಾಲಿಸಿದ ಅಲ್ಲಾಹನ ಆಣೆ, ನನಗೆ ಯಾವುದೇ ಪೆಟ್ಟು ಅಥವಾ ಗಾಯ ಆಗಲೇ ಇಲ್ಲವೆಂದು ಅನಿಸುತ್ತಿತ್ತು. ಒಂದು ವರದಿಯಲ್ಲಿ ಹೀಗಿದೆ – ಹಝ್ರತ್ ಅಬೂಖತಾದ(ರ)ರನ್ನು ನೋಡಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಲ್ಲಾಹ್, ಇವರ ಕೂದಲು ಮತ್ತು ಇವರ ಚರ್ಮದಲ್ಲಿ ಅನುಗ್ರಹವನ್ನು ಇರಿಸು. ಮತ್ತೆ ಹೀಗೆ ಹೇಳಿದರು: ನಿಮ್ಮ ಮುಖ ಯಶಸ್ವಿಯಾಯಿತು. ಅನಂತರ ಎಪ್ಪತ್ತನೇ ವಯಸ್ಸಿನಲ್ಲಿ ಹಝ್ರತ್ ಅಬೂಖತಾದ(ರ) ನಿಧನಗೊಂಡಾಗ ಆಗಲೂ ಅವರಿಗೆ ಹದಿನೈದು ವಯಸ್ಸು ಪ್ರಾಯ ಮಾತ್ರವಾಗಿದೆ ಎಂದು ಅವರ ಮುಖವನ್ನು ನೋಡುವಾಗ ಅನಿಸುತ್ತಿತ್ತು.

ಹಝ್ರತ್ ಪೈಗಂಬರ್(ಸ) ಧುಲ್‌ಖರ್‌ದ್‌ಗೆ ತಲುಪಿದ ಬಗ್ಗೆ ವಿವರಣೆ ಇದೆ. ಹಝ್ರತ್ ಸಲಮ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಇಶಾದ ಹೊತ್ತಿನಲ್ಲಿ ತಲುಪಿದರು ಮತ್ತು ಬುಗ್ಗೆಯ ಬಳಿ ಡೇರೆ ಹಾಕಿದರು. ಅಲ್ಲಿ ನಾನು ಶತ್ರುಗಳನ್ನು ತಡೆದು ನಿಲ್ಲಿಸಿದ್ದೆ. ನಾನು ಶತ್ರುಗಳಿಂದ ಕಸಿದುಕೊಂಡಿದ್ದ ಒಂಟೆಗಳನ್ನು ಮತ್ತು ಇತರ ಎಲ್ಲ ವಸ್ತುಗಳನ್ನು ಹಝ್ರತ್ ಪೈಗಂಬರ್(ಸ) ತನ್ನ ಬಳಿ ಇರಿಸಿಕೊಂಡಿದ್ದರು. ಶತ್ರುಗಳಿಂದ ಕಸಿದುಕೊಳ್ಳಲಾದ ಒಂಟೆಗಳಲ್ಲಿ ಒಂದನ್ನು ಹಝ್ರತ್ ಬಿಲಾಲ್(ರ) ಕೊಯ್ದರು. ಹಝ್ರತ್ ಪೈಗಂಬರ್(ಸ)ರಿಗಾಗಿ ಅದರ ಯಕೃತ್ತು ಮತ್ತು ಗೂನನ್ನು ಅವರು ಹುರಿದರು. ಹಝ್ರತ್ ಸಅದ್ ಬಿನ್ ಉಬಾದ(ರ) ಖರ್ಜೂರಗಳನ್ನು ಹೊತ್ತಿದ್ದ ಹತ್ತು ಒಂಟೆಗಳನ್ನು ಕಳುಹಿಸಿದ್ದರು. ಅವುಗಳು ಹಝ್ರತ್ ಪೈಗಂಬರ್(ಸ)ರಿಗೆ ಧುಲ್‌ಖರ್‌ದ್‌ನಲ್ಲಿ ಲಭಿಸಿದುವು.

ಹಝ್ರತ್ ಸಲಮ[(ರ)] ಹೇಳುತ್ತಾರೆ: ನಾನು ಹಝ್ರತ್ ಪೈಗಂಬರ್[(ಸ)]ರೊಡನೆ ಹೇಳಿದೆ, ನಾನು ಶತ್ರುಗಳನ್ನು ನೀರು ತೆಗೆದುಕೊಳ್ಳುವುದರಿಂದ ತಡೆದಿದ್ದೇನೆ. ಅವರು ಬಾಯಾರಿಕೆಯಿಂದ ಇದ್ದಾರೆ. ನೀವು ನನ್ನನ್ನು ನೂರು ಯೋಧರೊಂದಿಗೆ ಕಳುಹಿಸಿರಿ. ನಾನು ಅವರನ್ನು ಹಿಂಬಾಲಿಸಿ ಅವರ ಪ್ರತಿಯೊಬ್ಬ ದೂತನನ್ನು ಕೂಡ ವಧಿಸುವೆನು. ಇದನ್ನು ಆಲಿಸಿ ಹಝ್ರತ್ ಪೈಗಂಬರ್[(ಸ)] ನಕ್ಕರು. ಇದರಿಂದ ಬೆಂಕಿಯ ಬೆಳಕಿನಲ್ಲಿ ಅವರ ಸುಂದರ ಹಲ್ಲುಗಳು ಕಾಣಬಹುದಾಗಿತ್ತು. ಹಝ್ರತ್ ಪೈಗಂಬರ್[(ಸ)] ಹೇಳಿದರು: ಎಲೈ ಸಲಮ, ನಿನಗೆ ಹಾಗೆ ಮಾಡಲು ಸಾಧ್ಯವೇ? ಹಝ್ರತ್ ಸಲಮ[(ರ)] ಹೇಳಿದರು: ನಿಮಗೆ ಗೌರವವನ್ನು ನೀಡಿದ ಅಲ್ಲಾಹನ ಆಣೆ, ನನಗೆ ಸಾಧ್ಯವಿದೆ. ಹಝ್ರತ್ ಪೈಗಂಬರ್[(ಸ)] ಹೇಳಿದರು: **ಮಲಕ್‌ತ ಫಸ್‌ಜಿಹ್**. ನೀನು ಅವರನ್ನು ಹಿಡಿಗೂಡಿದ್ದೀರಿ ಎಂದಾದರೆ, ಅವರೊಡನೆ ಸೌಮ್ಯವಾಗಿ ವರ್ತಿಸು. ಇದು ಅರೇಬಿಯದ ನಾಣ್ಣುಡಿಗಳಲ್ಲಿ ಒಂದಾಗಿದೆ. ಸೌಮ್ಯತೆ ತೋರಿಸುವುದು ಮತ್ತು ಕಠಿಣವಾಗಿ ವರ್ತಿಸದೇ ಇರುವುದೇ ಅತ್ಯುತ್ತಮ ಕ್ಷಮಾಪಣೆಯಾಗಿದೆ ಎಂದಾಗಿದೆ ಇದರ ಅರ್ಥ.

ಈ ಯುದ್ಧಕ್ಕಾಗಿ ಹಝ್ರತ್ ಪೈಗಂಬರ್[(ಸ)] ಬುಧವಾರ ಬೆಳಿಗ್ಗೆ ಹೊರಟರು. ಶತ್ರುಗಳ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಗೊತ್ತಾಗಲಿಕ್ಕಾಗಿ ಹಝ್ರತ್ ಪೈಗಂಬರ್[(ಸ)] ಒಂದು ರಾತ್ರಿ ಮತ್ತು ಒಂದು ದಿನ ಧ್ಖಲ್‌ಖರ್‌ದ್‌ನಲ್ಲಿ ತಂಗಿದರು. ಅನಂತರ ಸೋಮವಾರದಂದು ಮದೀನಕ್ಕೆ ತಲುಪಿದರು. ಹೀಗೆ ಹಝ್ರತ್ ಪೈಗಂಬರ್[(ಸ)] ಐದು ರಾತ್ರಿಗಳು ಮದೀನದಿಂದ ಹೊರಗೆ ಇದ್ದರು.

ಈಗ ಒಂದು ಕಾರ್ಯಾಚರಣೆಯ ಬಗ್ಗೆ ಪ್ರಸ್ತಾಪಿಸುತ್ತೇನೆ. ಇದನ್ನು ನಜದಿನ ಕಡೆಗೆ ಹಝ್ರತ್ ಅಬಾನ್ ಬಿನ್ ಸಈದ್‌ರ ದಂಡಯಾತ್ರೆಯೆಂದು ಕರೆಯಲಾಗುತ್ತದೆ. ಇದು ಹಿಜರೀ 7, ಮುಹರ್ರಮ್ ಮಾಸದಲ್ಲಿ ನಡೆದಿತ್ತು. ಮತ್ತೊಂದು ವರದಿಯ ಪ್ರಕಾರ ಇದರ ತಾರೀಕು ಹಿಜರೀ 7, ಜಮಾದಿಸ್ಸಾನಿ ಎಂದು ಹೇಳಲಾಗಿದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್[(ರ)] ಸಹ ಇದರ ತಾರೀಕು ಹಿಜರೀ 7, ಮುಹರ್ರಮ್ ಎಂದು ಬರೆದಿದ್ದಾರೆ. ಅದು ಹೆಚ್ಚು ಸರಿಯೆಂದು ತೋರುತ್ತಿದೆ. ಹಝ್ರತ್ ಅಬಾನ್[(ರ)]ರ ತಂದೆತಾತಂದಿರು ಖುರೈಶಿಯರಾಗಿದ್ದರು. ಅವರ ಸಹೋದರ ಅಮ್ರ್ ಮತ್ತು ಖ಼ಾಲಿದ್ ಮುಸ್ಲಿಮ್ ಆಗಿದ್ದರು. ಅವರು ಹಿಜರೀ 13ರಲ್ಲಿ ಶಹೀದ್ ಆದರು. ಮತ್ತೊಂದು ವರದಿಯ ಪ್ರಕಾರ ಅವರು ಹಿಜರೀ 27ರಲ್ಲಿ ಹಝ್ರತ್ ಉಸ್ಮಾನ್[(ರ)]ರ ಖಿಲಾಫತ್ ಕಾಲದಲ್ಲಿ ನಿಧನರಾದರು ಎಂದಿದೆ. ಈ ಕಾರ್ಯಾಚರಣೆಯ ಪ್ರಸ್ತಾಪ ಬುಖ಼ಾರಿಯಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್[(ಸ)] ಹಝ್ರತ್ ಅಬಾನ್[(ರ)]ರನ್ನು ಒಂದು ಕಾರ್ಯಾಚರಣೆಗಾಗಿ ನಿಶ್ಚಯಿಸಿ ಮದೀನದಿಂದ ನಜದಿನ ಕಡೆಗೆ ಕಳುಹಿಸಿದರು. ಹಝ್ರತ್ ಅಬೂಹುರೈರ[(ರ)] ಹೇಳುತ್ತಾರೆ: ಅನಂತರ ಅಬಾನ್ ಮತ್ತು ಅವರ ಸಂಗಡಿಗರು ನಜದನ್ನು ಜಯಿಸಿದ ನಂತರ ಹಝ್ರತ್ ಪೈಗಂಬರ್[(ಸ)]ರ ಬಳಿಗೆ ಖೈಬರ್‌ಗೆ ಬಂದರು.

ಮತ್ತೊಂದು ಪ್ರಸಿದ್ಧ ಯುದ್ಧದ ಬಗ್ಗೆ ಚರಿತ್ರೆಯಲ್ಲಿ ಪ್ರಸ್ತಾಪ ಬರುತ್ತದೆ. ಅದನ್ನು ಖೈಬರ್ ಯುದ್ಧವೆಂದು ಕರೆಯಲಾಗುತ್ತದೆ. ಖೈಬರ್ ಅನೇಕ ಕಾರಂಜಿಗಳನ್ನು ಮತ್ತು ನೀರಿನಿಂದ ತುಂಬಿರುವ ಒಂದು ವಿಶಾಲವಾದ ಹಚ್ಚಹಸಿರು ಪ್ರದೇಶವಾಗಿದೆ. ಅದನ್ನು ಅರೇಬಿಯಾದಲ್ಲಿ ಖರ್ಜೂರದ ಅತ್ಯಂತ ದೊಡ್ಡ ತೋಟವೆಂದು ಗಣಿಸಲಾಗುತ್ತದೆ. ಚರಿತ್ರೆಯ ವರದಿ ಪ್ರಕಾರ ಹಝ್ರತ್ ಮೂಸಾ[(ಅ)]ರ ಕಾಲದಿಂದ ಅಲ್ಲಿ ಬನೀ ಇಸ್ರಾಯೀಲಿನ ಯಹೂದಿಯರು ನೆಲೆಸಿದ್ದರು. ಕೆಲವು ಇತರ ವರದಿಗಳು ಕೂಡ ಇವೆ. ಇದರಿಂದ ಗೊತ್ತಾಗುವುದೇನೆಂದರೆ, ಖೈಬರ್‌ನಲ್ಲಿ ಪ್ರಾಚೀನ ಕಾಲದಿಂದಲೇ ದೊಡ್ಡ ದೊಡ್ಡ ಕೋಟೆಗಳನ್ನು ನಿರ್ಮಿಸಿ ಯಹೂದಿಯರು ನೆಲೆಸಿದ್ದರು. ಇಬ್ರಾನಿ ಭಾಷೆಯಲ್ಲಿ ಖೈಬರ್‌ನ ಅರ್ಥ ಕೋಟೆಗಳು ಎಂದಾಗಿದೆ. ಯಹೂದಿಯರ ಕೆಲವು ಗೋತ್ರಗಳು ಮದೀನದಲ್ಲೂ ನೆಲೆಸಿದ್ದರು. ಆದರೆ ಖೈಬರ್‌ನ ಯಹೂದಿಯರನ್ನು ಒಂದು ಸಂಗತಿ ಪ್ರತ್ಯೇಕಗೊಳಿಸುತ್ತಿತ್ತು. ಅದೇನೆಂದರೆ ಅಲ್ಲಿಯ ಯಹೂದಿಯರು ಇತರ ಎಲ್ಲ ಯಹೂದಿಯರಿಗಿಂತ ಧೈರ್ಯದಲ್ಲಿ ಮತ್ತು ಯುದ್ಧದ ವೇಳೆ ಸ್ಥಿರಚಿತ್ತತೆ ತೋರಿಸುವುದರಲ್ಲಿ ಉತ್ತಮರಾಗಿದ್ದರು. ಅವರಲ್ಲಿ ಅನ್ಯೋನ್ಯ ಐಕ್ಯತೆಯೂ ಇತರರಿಗಿಂತ ಹೆಚ್ಚಾಗಿತ್ತು. ಅದರ ಕಾರಣದಿಂದ ಅರೇಬಿಯದಲ್ಲಿ ಶಕ್ತಿ ಮತ್ತು ಸಾಮರ್ಥ್ಯದ ಒಂದು ಒಕ್ಕೂಟ ಎಂದು ಅವರನ್ನು ಭಾವಿಸಲಾಗುತ್ತಿತ್ತು. ಮದೀನದ ಯಹೂದಿಯರಾಗಲೀ ಖೈಬರ್‌ನ ಯಹೂದಿಯರಾಗಲಿ ಹಝ್ರತ್ ಪೈಗಂಬರ್[(ಸ)] ಮತ್ತು ಇಸ್ಲಾಮಿನ ವಿರುದ್ಧ ಅವರ ಒಳಸಂಚು ಮತ್ತು ಪಿತೂರಿಗಳು ವಿದ್ರೋಹದ ಮಟ್ಟಕ್ಕೆ ಏರಿತ್ತು. ಹಗೆ ಮತ್ತು ಶತ್ರುತ್ವದಲ್ಲಿ ವರ್ಧಿಸುತ್ತಾ ಇದ್ದ ಈ ಸಮುದಾಯವು ಇಸ್ಲಾಂ ಮತ್ತು ಹಝ್ರತ್ ಪೈಗಂಬರ್[(ಸ)]ರನ್ನು ಕೊನೆಗೊಳಿಸಲು ತಮ್ಮ ಸಕಲ ಶಕ್ತಿಗಳನ್ನು ಕಾರ್ಯಗತಗೊಳಿಸುವುದರಲ್ಲಿ ಯಾವುದೇ ಕೊರತೆ ಉಂಟುಮಾಡಲಿಲ್ಲ. ಮದೀನದಿಂದ ಹೊರಗೆ ಹಾಕಿದ ನಂತರ ಮದೀನದ ಯಹೂದಿಯರಲ್ಲಿ ಕೆಲವರು ಖೈಬರ್‌ನಲ್ಲಿ ನೆಲೆಸಿದ್ದರು. ಇದರಿಂದ ಮೊದಲೇ ಒಂದು ದೊಡ್ಡ ಯುದ್ಧಶಕ್ತಿಯಾಗಿದ್ದ ಖೈಬರ್ ಈಗ ಮುಸ್ಲಿಮರ ವಿರುದ್ಧ ಅಪಾಯಕಾರಿ ಯೋಜನೆಗಳನ್ನು ಮಾಡುವುದರ ಕೇಂದ್ರವಾಯಿತು. ಈ ವಿಶಿಷ್ಟ ಹಿನ್ನಲೆಯಲ್ಲಿ ಹಝ್ರತ್ ಪೈಗಂಬರ್[(ಸ)] ದೈವಿಕ ಸೂಚನೆಗಳ ಆಧಾರದಲ್ಲಿ ಖೈಬರ್‌ನ ಕಡೆಗೆ ಹೊರಡಲು ತೀರ್ಮಾನಿಸಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್[(ರ)] ಹೇಳುತ್ತಾರೆ: ಮೂಲಭೂತವಾಗಿ ನೋಡುವುದಾದರೆ ಹುದೈಬಿಯ ಸಂಧಿ ಒಂದು ಬಹಳ ದೊಡ್ಡ ವಿಜಯವಾಗಿತ್ತು. ಪವಿತ್ರ ಖುರ್‌ಆನ್ ಇದನ್ನು ಒಂದು ಮಹತ್ತಾದ ವಿಜಯವೆಂದು ವಿವರಿಸಿದೆ. **ಇನ್ನಾ ಫತಹ್‌ನಾ ಲಕ ಫತ್‌ಹಮ್ಮುಬೀನಾ** – ನಿಸ್ಸಂದೇಹವಾಗಿಯೂ ನಾವು ನಿಮಗೆ ಒಂದು ಸ್ಪಷ್ಟವಾದ ವಿಜಯವನ್ನು ದಯಪಾಲಿಸಿದ್ದೇವೆ ಎಂದು ಅಲ್ಲಾಹನು ಹೇಳುತ್ತಾನೆ. ಸ್ಪಷ್ಟವಾದ ವಿಜಯದ ಈ ಬಾಗಿಲನ್ನು ದಾಟುತ್ತಾ ಖೈಬರ್ ಮತ್ತು ಮಕ್ಕದಂತಹ ಮಹತ್ತಾದ ವಿಜಯಗಳು ಲಭಿಸಿದ್ದುವು. ಸತ್ಯದಲ್ಲಿ ಹುದೈಬಿಯ ಸಂಧಿಯನ್ನು ಮಾಡಿ ಮರಳುವಾಗ ಮಕ್ಕಾ ಮತ್ತು ಮದೀನದ ಮಾರ್ಗ ಮಧ್ಯೆ ಸೂರತುಲ್ ಫತಹ್ ಅವತೀರ್ಣಗೊಂಡಾಗಲೇ ಖೈಬರ್ ವಿಜಯದ ವಾಗ್ದಾನವನ್ನು ಅಲ್ಲಾಹನು ಮಾಡಿದ್ದನು. ಖೈಬರ್‌ಗೆ ಹೋಗಲಿಕ್ಕಾಗಿ ಹಝ್ರತ್ ಪೈಗಂಬರ್[(ಸ)] ಘೋಷಣೆಯನ್ನು ಮಾಡಿಸಿದಾಗ ಹುದೈಬಿಯ

ಸಂಧಿಯಲ್ಲಿ ಭಾಗಿಯಾದವರು ಮಾತ್ರ ತನ್ನ ಜೊತೆಗೆ ಹೋಗಬಹುದು ಎಂಬುದಾಗಿ ಘೋಷಣೆ ಮಾಡಿಸಿದರು. ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹೇಳಿದರು: ಯುದ್ಧ ಸಂಪತ್ತಿಗಾಗಿ ಹೊರಡಲು ಉದ್ದೇಶಿಸುವವರು ನನ್ನ ಜೊತೆಗೆ ಬರಬೇಡಿರಿ. ಕೇವಲ ಜಿಹಾದ್ ಮಾಡಲು ಉದ್ದೇಶಿಸುವವರು ಮಾತ್ರ ನನ್ನ ಜೊತೆಗೆ ಹೊರಡಲಿ.

ಅಲ್ಲಾಮ ಇಬ್ನು ಇಸ್‌ಹಾಖ್ ಮತ್ತು ಇಬ್ನು ಸಅ್‌ದ್ ಹೇಳುತ್ತಾರೆ: ಮೊತ್ತಮೊದಲ ಬಾರಿಗೆ ಧ್ವಜದ ಪ್ರಸ್ತಾಪ ಖೈಬರ್ ಯುದ್ಧದಲ್ಲಿ ಬರುತ್ತದೆ. ಅದಕ್ಕೆ ಮುಂಚೆ ಕೇವನ ಸಣ್ಣ ಬಾವುಟಗಳು ಇರುತ್ತಿದ್ದುವು. ಹಝ್ರತ್ ಪೈಗಂಬರ್(ಸ)ರ ಧ್ವಜ ಕಪ್ಪು ಬಣ್ಣದ್ದಾಗಿತ್ತು. ಅದನ್ನು ಹಝ್ರತ್ ಆಯಿಶ(ರ)ರ ಹೊದಿಕೆಯಿಂದ ಮಾಡಲಾಗಿತ್ತು. ಅದರ ಹೆಸರು ಉಖಾಬ್ ಎಂದಾಗಿತ್ತು. ವರದಿಗಳಲ್ಲಿ ಹಝ್ರತ್ ಅಲಿ(ರ)ರಿಗೂ ಒಂದು ಧ್ವಜ ನೀಡಿದ್ದಾಗಿ ಪ್ರಸ್ತಾಪ ಲಭಿಸುತ್ತದೆ. ಆದರೆ ಆ ಧ್ವಜವನ್ನು ಖೈಬರ್‌ನಲ್ಲಿ ನೀಡಲಾಗಿತ್ತು. ಈ ಯಾತ್ರೆಯಲ್ಲಿ ಉಮ್ಮುಲ್ ಮುಅ್‌ಮಿನೀನ್ ಉಮ್ಮು ಸಲ್ಮ(ರ) ಹಝ್ರತ್ ಪೈಗಂಬರ್(ಸ)ರ ಜೊತೆಗೆ ಇದ್ದರು. ಒಂದು ವರದಿಯ ಪ್ರಕಾರ ಆರು ಅಥವಾ ಏಳು ಮಹಿಳಾ ಸಹಾಬಿಯರು ಸಹ ಈ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಜೊತೆಗೆ ಹೋಗಿದ್ದರು. ಮತ್ತೊಂದು ವರದಿಯ ಪ್ರಕಾರ ಇಪ್ಪತ್ತು ಸಹಾಬಿಯರು ಈ ಯುದ್ಧದಲ್ಲಿ ಭಾಗಿಯಾಗಿದ್ದರು.

ಖೈಬರ್‌ನ ಯಹೂದಿಯರಿಗೆ ಮುಸ್ಲಿಮರ ಸೇನೆಯ ಆಗಮನದ ಮಾಹಿತಿ ಲಭಿಸಿದಾಗ ಯುದ್ಧಕ್ಕಾಗಿ ನೆರವು ನೀಡಲು ವಿನಂತಿಸಲಿಕ್ಕಾಗಿ ಅವರು ಸುತ್ತಮುತ್ತಲಿನ ಪರಾಕ್ರಮಿ ಗೋತ್ರಗಳ ಕಡೆಗೆ ಒಂದು ಸಂಘವನ್ನು ತಯಾರುಮಾಡಿ ಕಳುಹಿಸಿದರು. ಮುರ್ರ ಗೋತ್ರದವರು ದೂರದರ್ಶಿತ್ವದೊಂದಿಗೆ ನೆರವು ನೀಡುವುದನ್ನು ನಿರಾಕರಿಸಿದರು. ಅದೇ ವೇಳೆ ಬನೂ ಅಸದ್ ಮತ್ತು ಬನೂ ಗ಼ತ್‌ಫಾನ್‌ನಂತಹ ಪರಾಕ್ರಮಿ ಗೋತ್ರಗಳು ಆಯುಧಧಾರಿಗಳಾದ ಸೈನಿಕರನ್ನು ಒಳಗೊಂಡ ಸೇನೆಯೊಂದಿಗೆ ನೆರವು ನೀಡಲು ತಯಾರಾದರು.

(ಹುಝೂರ್ ಹೇಳಿದರು:) ಈ ಕುರಿತು ಇನ್ನಷು ವಿವರಣೆ ಮುಂದಿನ ಬಾರಿ ನೀಡಲಾಗುವುದು ಇನ್‌ಶಾ ಅಲ್ಲಾಹ್.

(ಖುತ್ಬ ಸಾನಿಯಕ್ಕೆ ಮುಂಚೆ ಹುಝೂರ್ ಮೂವರು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ಼ ಗ಼ಾಯಿಬ್ ನಿರ್ವಹಿಸುವುದಾಗಿಯೂ ಹೇಳಿದರು. ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ಹುಝೂರ್ ದುಆ ಮಾಡಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis****(atba)*

At, ***'Masjid Mubarak'****, Islamabad, Tilford,* U.K. On 31-01-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon